> ಸೆಮಿನಾರೊಂದು ಚೆನ್ನಾಗಿ ಆಗಿಬಿಟ್ಟು, ಅದರ ಬಗ್ಗೆ ಮೀಡಿಯಾ ಕವರೇಜ್ ಸರಿಯಾಗಿ ಆಗಿಬಿಟ್ರೆ, ಎಲ್ಲಾ ಕಡೆ  ಹನಿರತ್ನ ಕುರುಕ್ಷೇತ್ರದ್ದೇ ಹವಾ... ಹಾಂ, ಸೆಮಿನಾರ್ ಕೊನೇಗೆ ಕನ್ನಡ ಫಿಲ್ಮ್ ಇಂಡಸ್ಟ್ರೀ ಕಡೆಯಿಂದ ಹಾಗೂ ಹನಿರತ್ನ ಅಭಿಮಾನಿಗಳ ವತಿಯಿಂದ ನಿಮಗೊಂದು ದೊಡ್ಡ ಸನ್ಮಾನ. ಆ್ಯಪಲ್ ಹಾರ, ಕ್ರೇನು ಆರೇಂಜ್ ಮಾಡಿಬಿಡೋಣ...



ಯತ್ನಾಳು. ಮಹಾಭಾರತ ಬರೆದದ್ದು ವಾಲ್ಮೀಕಿ ಅಂತ ವಿಧಾನಸಭೇಲಿ ಹೇಳವ್ರೆ. ಅವರು ಅಂಥ ತಪ್ಪು ಮಾಡಬಹುದಿತ್ತಾ, ನೀನೇ ಹೇಳು...'

'ತಪ್ಪು ಕಣಣ್ಣ ತಪ್ಪು. ಆದರೆ, ಅದೇ ಸದನದಲ್ಲಿ ಮಹಾಭಾರತ ಬರೆದದ್ದು ವಾಲ್ಮೀಕಿ ಅಲ್ಲ ಅಂತ ಉಳಿದೋರು ಹೇಳಿದರಲ್ಲ...'

ಕವಿರತ್ನರ ಮಾತು ಮುಗಿಯುವ ಮೊದಲೇ, ಸಾಹೇಬರು ಮಧ್ಯಪ್ರವೇಶಿಸಿದರು. 'ಏನು ಹೇಳಿದ್ದು ಮಣ್ಣಾಂಗಟ್ಟಿ. ಒಬ್ಬರಾದರೂ ನನ್ನ ಹೆಸರು ಹೇಳಿದ್ರಾ?'

ಕವಿರತ್ನರು ತಕ್ಷಣವೇ ತುಟಿಕಚ್ಚಿಕೊಂಡು ತಮ್ಮ ಮಾತು ನುಂಗಿದರು. ವಿಷಯ ಅವರಿಗೆ ಅರ್ಥವಾಯಿತು. ನಿಧಾನ ಧ್ವನಿಯಲ್ಲಿ – 'ಅರೆರೆ ಹೌದಲ್ಲಣ್ಣ... ಒಬ್ಬರಾದರೂ ನಿಮ್ಮನ್ನು ನೆನಪಿಸಿಕೊಳ್ಳೋದು ಬೇಡವೇ?'

'ಎಂಥ ಅನ್ಯಾಯ ನೋಡು. ಟೈಟಲ್ ಜೊತೆಗೇನೆ ನನ್ನ ಹೆಸರು ಇದ್ರೂ ಈ ಎಮ್ಮೆಲ್ಲೆಗೋಳ ಕಣ್ಣಿಗೆ ನಮ್ಮ ಥ್ರೀಡಿ ಸಿನಿಮಾ ಬಿದ್ದೇ ಇಲ್ಲ. ಇವ್ರೆಲ್ಲ ಇನ್ನೂ ವಾಲ್ಮೀಕಿ ಕಾಲದಾಗೇ ಅವ್ರೆ. ಒಂಚೂರೂ ಅಪ್‌ಡೇಟ್ ಆಗೇ ಇಲ್ಲ' ಎಂದು ಸಾಹೇಬರು ಅಲವತ್ತುಕೊಳ್ಳತೊಡಗಿದರು.

ಕವಿರತ್ನರಿಗೂ ಪೇಚಿಗಿಟ್ಟುಕೊಂಡಿತು. ಏನು ಹೇಳಿದರೂ ಕಷ್ಟ. ಸುಮ್ಮನಿದ್ದರೂ ಕಷ್ಟ. ಹೀಗೆ ಯೋಚಿಸುತ್ತಿರುವಾಗಲೇ ತಲೆ ಮೇಲೆ ಸೇಬು ಬಿದ್ದಂತೆ ಒಂದು ಐಡಿಯಾ ಹೊಳೀತು.

'ಅಣ್ಣಾ, ಒಂದು ಕೆಲಸ ಮಾಡೋಣ. ಈ ಎಮ್ಮೆಲ್ಲೆಗಳಿಗೆ ಮಾತ್ರವಲ್ಲ, ಇಡೀ ರಾಜ್ಯಕ್ಕೆ, ದೇಶಕ್ಕೆ ನಮ್ಮ ಕುರುಕ್ಷೇತ್ರ ಸಿನಿಮಾದ ಬಗ್ಗೆ ತಿಳಿಯಬೇಕು. ಹಂಗೆ ಮಾಡೋಣ...'

'ಏನು ಮಾಡೋದು. ಡೆಲ್ಲೀಲಿ ಸ್ಪೆಷಲ್ ಶೋ ಮಾಡಿ ಇಲ್ಲಿಂದ ಎಮ್ಮೆಲ್ಲೆಗೋಳ್ನ ಕರಕೊಂಡು ಹೋಗೋಣ್ವಾ... ಅಲ್ಲಿ ಎಂಪಿಗೋಳ್ನೂ ಕರಿಬೋದು. ಪ್ರಧಾನಮಂತ್ರಿಗೋಳು ಸಿನಿಮಾ ನೋಡಂಗಾದ್ರೆ ಇನ್ನೂ ಒಳ್ಳೇದು...'

'ಅಣ್ಣೋ ನಿಮ್ಮ ಐಡಿಯಾ ಸಖತ್ತಾಗೈತೆ. ಆದರೆ, ಅದಕ್ಕೆ ಮೊದಲು ಇನ್ನೊಂದು ಕೆಲಸ ಮಾಡಬೇಕು. ಇದರ ಬಜೆಟ್ಟೂ ಕಮ್ಮಿ.'

'ಕಮ್ಮಿ ಬಜೆಟ್ಟಾ?'

'ಕಮ್ಮಿ ಬಜೆಟ್ ಅಂತ ಬೇಜಾರು ಮಾಡಿಕೋಬೇಡಣ್ಣ. ರಿಸಲ್ಟ್ ಮಾತ್ರ ಸೂಪರ್ ಆಗಿರುತ್ತೆ.'

'ಹಂಗಾದ್ರೆ ಏನದು ಹೇಳು?'

'ಏನಿಲ್ಲ, ನಮ್ಮ ಕುರುಕ್ಷೇತ್ರ ಸಿನಿಮಾದ ಬಗ್ಗೆ...'

'ಕುರುಕ್ಷೇತ್ರ ಅಲ್ಲ, ಹನಿರತ್ನ ಕುರುಕ್ಷೇತ್ರ...'